# ಜೆ. ಜೋಷುವ ಗುಡ್‌ವಿನ್

ಎಚ್. ಪಾಂಡುರಂಗ ವಿಠಲ

ಸ್ವಾಮಿ ವಿವೇಕಾನಂದರು ಭಾರತಕ್ಕೆ ಮತ್ತು ಜಗತ್ತಿಗೆ ನೀಡಿರುವ ಪರಮಾದ್ಭುತ ಕಾಣಿಕೆಯನ್ನು ನೆನೆಸಿಕೊಂಡಾಗ ಗುಡ್‌ವಿನ್‌ರಿಗೆ ನಾವು ಚಿರಋಣಿಗಳಾಗದೆ ಇರುವುದು ಸಾಧ್ಯವೇ ಇಲ್ಲ. ಅವರ ಅಲ್ಪಾಯುಷ್ಯ ಜೀವನದ ಕಿರು ಪರಿಚಯವನ್ನು ಮಾಡಿಕೊಟ್ಟಿರುವ ಶ್ರೀ ಪಾಂಡುರಂಗ ವಿಠಲರು ಮೈಸೂರಿನ ನಿವಾಸಿಗಳು.

**ಜಗತ್ತಿನ ಮಹಾಪುರುಷರು** ತಮ್ಮ ಉಪದೇಶಗಳನ್ನು ಪ್ರಚಾರಕ್ಕಾಗಿ ಮಾಡುವುದಿಲ್ಲ, ಭವಿಷ್ಯಕ್ಕಾಗಿ ಅವನ್ನು ಹಿಡಿದಿಡುವ ಬಗ್ಗೆ ಯೋಚಿಸುವುದೂ ಇಲ್ಲ. ವೇದ ಉಪನಿಷತ್ತುಗಳ ಋಷಿಗಳ ಬಗ್ಗೆ ನಮಗೆ ತಿಳಿದಿರುವುದು ಅಲ್ಪ. ಕ್ರಿಸ್ತ ಬುದ್ಧರ ಉಪದೇಶಗಳು ಲಭ್ಯವಿದ್ದರೂ ಅವು ಕೆಲಕಾಲದ ಅನಂತರ ಶಿಷ್ಯರು ನೆನಪಿನಿಂದ ಬರೆದಿಟ್ಟವು. ಭಗವದ್ಗೀತೆಯೂ ಹೀಗೇ—ಅದರ ಉದ್ದೇಶವೇ ಬೇರೆ—ವ್ಯಾಸರು ಅದನ್ನು ಜಗತ್ತಿನ ಒಳಿತಿಗಾಗಿ ಹಿಡಿದಿಟ್ಟರು. ಈಚೆಗೆ ಶ್ರೀರಾಮಕೃಷ್ಣರು ಜಗತ್ತಿನ ಎಲ್ಲರಿಗೂ ಅನ್ವಯಿಸಬಹುದಾದ, ಹೊಸ ವಿಚಾರಗಳನ್ನು ಶಿಷ್ಯರಿಗೆ ಸೂಕ್ತಕಾಲದಲ್ಲಿ ಹೇಳಿ, ಅವರನ್ನು ಮುನ್ನಡೆಸಿದರು. "ಮ" (ಮಹೇಂದ್ರನಾಥ ಗುಪ್ತ) ಅದನ್ನು ಕೇಳಿ ವಿಶ್ವಾಸದಿಂದ ಬರೆದಿಟ್ಟುದರಿಂದ ಮಾತ್ರ ಈಚಿನವರಿಗೂ ಅವನ್ನು ತಿಳಿಯಲು ಸಾಧ್ಯವಾಯಿತು.

ವ್ಯಾಸರು ತಮ್ಮ ವಿಚಾರಗಳ ನುಗ್ಗಿ ಬರುವ ರಭಸವನ್ನು ಲೇಖನಿಯಲ್ಲಿ ಹಿಡಿದಿಡಬಲ್ಲ ಸಹಾಯಕನಿಗಾಗಿ ತಪಸ್ಸು ಮಾಡಿ, ಗಣೇಶನನ್ನು ನಿಯಮಿಸಿಕೊಂಡು ಮಹಾಭಾರತವನ್ನು ರಚಿಸಿದರಂತೆ! ಹೀಗೆ ವಿವೇಕಾನಂದರಿಗೆ ಜೋಷುವ ಗುಡ್‌ವಿನ್ ಎಂಬ ಸಹಾಯಕ ಸಿಕ್ಕಿದ್ದರಿಂದ, ಅವರ ಕೆಲಸ ಜಗತ್ತಿಗೆ ತಿಳಿಯುವಂತಾಗಿ ಭಾರತ ಹಾಗೂ ವಿಶ್ವದಲ್ಲಿ ದೇಶಭಕ್ತಿಯ ಹಾಗೂ ವೇದಾಂತ ವಿಚಾರದ ಹೊಸ ಅಲೆ ಎದ್ದಿತು. ಸ್ವಾಮೀಜಿಯವರು ಪ್ರವಾದಿಯ ಸ್ಫೂರ್ತಿಯಿಂದ ವೇಗವಾಗಿ, ಆಶುಭಾಷಣವಾಗಿ ಹೇಳಿದ್ದನ್ನೆಲ್ಲ ಪದಶಃ ಈತನು ಬರೆದುಕೊಳ್ಳುತ್ತಿದ್ದನಷ್ಟೇ ಅಲ್ಲ, ಅಪೂರ್ವವಾದ ಸ್ವಾಮಿ ನಿಷ್ಠೆಯಿಂದ ಸ್ವಾಮಿ ವಿವೇಕಾನಂದರಿಗೆ ಸೇವೆಯನ್ನೂ ಸಲ್ಲಿಸುತ್ತಿದ್ದನು.

೧೮೯೫ರಲ್ಲಿ ಇಂಗ್ಲೆಂಡಿನಿಂದ ನ್ಯೂಯಾರ್ಕಿಗೆ ಹಿಂದಿರುಗಿದ ವಿವೇಕಾನಂದರು ವಾರಕ್ಕೆ ೧೫-೧೭ ಉಪನ್ಯಾಸಗಳನ್ನು ಕೊಡುತ್ತ, ಬಳಿಬಂದವರಿಗೆ ಖಾಸಗಿ ಸಂದರ್ಶನಗಳನ್ನು ನೀಡುತ್ತ ಭಾರಿ ಪ್ರಮಾಣದ ಪತ್ರವ್ಯವಹಾರವನ್ನೂ ನಡೆಸುತ್ತಿದ್ದರು. ನ್ಯೂಯಾರ್ಕ್ ವೇದಾಂತ ಸೊಸೈಟಿ ಹೀಗೆ ರೂಪುಗೊಂಡಿತು. ಈ ಕಾಲದ ಭಾಷಣಗಳನ್ನು "ಕರ್ಮಯೋಗ"ದಲ್ಲಿ ಸಂಗ್ರಹಿಸಲಾಗಿದೆ. ಮುಂದಿನ ಪೀಳಿಗೆಗಾಗಿ ತಮ್ಮ ಉಪನ್ಯಾಸಗಳನ್ನು ಕಾಯ್ದಿರಿಸುವ



ಯೋಚನೆಯನ್ನೇ ಸ್ವಾಮೀಜಿ ಮಾಡಿರಲಿಲ್ಲ. ಅವರು ಪೂರ್ವಸಿದ್ಧತೆ ಇಲ್ಲದೆ ಸ್ಫೂರ್ತಿಯುತ ಆಶು ಭಾಷಣ ಮಾಡುತ್ತಿದ್ದರು. ಇಂಗ್ಲಿಷರಿಗಿಂತ ಅಮೆರಿಕನ್ನರು ಹೆಚ್ಚು ಪ್ರಾಯೋಗಿಕರು; ಈ ಉಪನ್ಯಾಸಗಳನ್ನು ಬರೆದಿಡಲು ಒಬ್ಬ ಶೀಘ್ರಲಿಪಿಕಾರನನ್ನು ನೇಮಿಸಿಕೊಳ್ಳಲು ಸಲಹೆ ಮಾಡಿದರು. ವೇದಾಂತ ಸೊಸೈಟಿಯವರು ಒಬ್ಬನನ್ನು ಆರಿಸಿದರು. ಆತ ಪ್ರವಾಹದೋಪಾದಿಯಲ್ಲಿ ನುಗ್ಗಿ ಬರುತ್ತಿದ್ದ ಶಬ್ದಗಳನ್ನಾಗಲಿ ಅವುಗಳ ಹಿಂದಿನ ಸ್ಫೂರ್ತಿಯನ್ನಾಗಲಿ ಹಿಡಿದಿಡಲು ಅಸಮರ್ಥನಾದ. ಪುನಃ ಆರಿಸಿದ ಇನ್ನೊಬ್ಬನದೂ ಅದೇ ಪಾಡಾಯಿತು. ಕೊನೆಗೆ ಡಿಸೆಂಬರ್ ೧೨ರಂದು ಜಾಹಿರಾತು ನೀಡಿದಾಗ ಶೀಘ್ರಲಿಪಿಕಾರ ಪತ್ರಕರ್ತ ಜೋಷುವ ಗುಡ್‌ವಿನ್ ರಂಗ ಪ್ರವೇಶಿಸಿದ.

ಇಂಗ್ಲೆಂಡಿನ ಬಡಕುಟುಂಬದಿಂದ ಬಂದ ಈ ತರುಣ ಉದ್ಯೋಗವನ್ನರಸುತ್ತ ವಿವಿಧ ಅನುಭವ ಗಳಿಸಿ, ನ್ಯೂಯಾರ್ಕಿನಲ್ಲಿ ನೆಲೆಸಿದ್ದ. ನ್ಯಾಯಾಲಯಗಳ ನಡವಳಿಯನ್ನು ವರದಿ ಮಾಡುವುದರಿಂದ ಆರಂಭಿಸಿ ಹನ್ನೊಂದು ವರ್ಷಕಾಲ ವಿವಿಧ ಪತ್ರಿಕೆಗಳ ಸಂಪಾದಕೀಯ ವಿಭಾಗಗಳಲ್ಲಿ ಕೆಲಸ ಮಾಡಿದ್ದ. ಅವನಿಗೆ ಮುಖ್ಯವಾದೊಂದು ವ್ಯಸನವಿತ್ತು: ಅವನು ಹುಟ್ಟು ಜೂಜುಕೋರ, ತನ್ನಲ್ಲಿದ್ದುದೆಲ್ಲ ಮುಗಿಯುವವರೆಗೂ ಆಡಿ ಸೋಲುತ್ತಿದ್ದ. ಇದೆಲ್ಲ ಸ್ವಾಮೀಜಿಯವರ ಸಂಪರ್ಕಕ್ಕೆ ಬರುವವರೆಗೆ; ಸ್ವಾಮೀಜಿ, "ಗುಡ್‌ವಿನ್, ನಿನ್ನ ಹೆಸರು ಬ್ಯಾಡ್‌ವಿನ್ ಎಂದಿರಬೇಕಿತ್ತು" ಎಂದು ಅವನನ್ನು ಹಾಸ್ಯ ಮಾಡುತ್ತಿದ್ದರು.

ಸ್ವಾಮೀಜಿಯವರೊಡನಿದ್ದ ಸ್ವಲ್ಪ ದಿನಗಳಲ್ಲಿ ಅವನ ಜೀವನವೇ ಪರಿವರ್ತನೆ ಹೊಂದಿತು. "ನಾನು ಬಡವನ ಮಗ. ಕೆಲಸ ಹುಡುಕಿಕೊಂಡು ಆಸ್ಟ್ರೇಲಿಯಾ, ಕೆನಡಾ, ಅಮೆರಿಕಾ ಮುಂತಾದ ದೇಶಗಳಲ್ಲಿ ತಿರುಗಿದೆ. ಕೆಲಸದಲ್ಲಿನ ನನ್ನ ಸಾಮರ್ಥ್ಯಕ್ಕಾಗಿ ಅನೇಕ ಶ್ರೀಮಂತರಿಂದ ಹೊಗಳಿಸಿಕೊಂಡಿದ್ದೇನೆ. ಆದರೆ ಈಗ ನಾನು ನನ್ನ ಸ್ವಾಮಿಯಿಂದ ಪಡೆಯುತ್ತಿರುವಂತಹ ನಿರ್ವ್ಯಾಜಪ್ರೇಮವನ್ನು ನಾನೆಲ್ಲೂ ಪಡೆದುದಿಲ್ಲ. ಇದು ನನ್ನನ್ನು ಅವರತ್ತ ಸೆಳೆಯುತ್ತಿದೆ, ಮತ್ತು ಸಂಪತ್ತನ್ನು ಗಳಿಸುವ ಪ್ರಯತ್ನವನ್ನು ನಾನೀಗ ತ್ಯಜಿಸಿದ್ದೇನೆ."

ಗುಡ್‌ವಿನ್ನನ ಜೀವನವಿಧಾನವನ್ನು ಸ್ವಾಮೀಜಿ ಸಂಪೂರ್ಣ ಬದಲಿಸಿದರು. ತನ್ನ ಮನಸ್ಸಿನಲ್ಲಿ ಅಚ್ಚೊತ್ತಿದ್ದ ಹಿಂದಿನ ಜೀವನದ ನೆನಪುಗಳನ್ನು ಆತ ಹೇಳಿಕೊಳ್ಳುವುದಿತ್ತು. ಸ್ವಾಮೀಜಿಯನ್ನಾತ ತನ್ನ ಸ್ನೇಹಿತ, ತಾತ್ವಿಕ ಮತ್ತು ಮಾರ್ಗದರ್ಶಿಯೆಂದು ಸ್ವೀಕರಿಸಿದ್ದು, ಅವರತ್ತ ಹೆಚ್ಚು ಹೆಚ್ಚು ಆಕರ್ಷಿತನಾಗಿದ್ದನು. ಇಹ ಮತ್ತು ಪರಗಳೆರಡರಲ್ಲೂ ಅವರನ್ನು ತನ್ನ ಗುರುವೆಂದು ಆತನು ತಿಳಿದಿದ್ದನು. ಗುರುವು ತಮ್ಮ ಉಪದೇಶಗಳನ್ನೂ ಅವುಗಳ ಹಿಂದಿನ ತಾರ್ಕಿಕ

ಸೂತ್ರವನ್ನೂ ಗ್ರಹಿಸಲು ಆಧಾರವಾದ ಆತನ ಪೂರ್ವಜನ್ಮ ಸಂಸ್ಕಾರವನ್ನು ಗುರುತಿಸಿದ್ದರು. ತನ್ನ ಅಂತರಂಗ-ಬಹಿರಂಗಗಳೆಲ್ಲವನ್ನೂ ನಿಚ್ಚಳವಾಗಿ ಅರಿತಿದ್ದರೂ ಗುರುವು ಎಂದೂ ಅವನನ್ನು ತಿರಸ್ಕರಿಸದೆ ಪ್ರೀತಿವಾತ್ಸಲ್ಯಗಳ ಹೊಳೆ ಹರಿಸುತ್ತಿದ್ದರೆಂಬುದು ಗುಡ್‌ವಿನ್ನನಿಗೆ ತೀರ ಹೊಸತಾದ ಅನುಭವ.

ಸ್ವಾಮೀಜಿಯವರಿಗೆ ಗುಡ್‌ವಿನ್ನನ ಬಗೆಗೆ ಯಾವ ಅಭಿಪ್ರಾಯವಿತ್ತು? ೨೮ರ ಎಳೆ ಪ್ರಾಯದಲ್ಲಿ ಆತನು ತೀರಿಕೊಂಡಾಗ, ಆತನ ತಾಯಿಗೆ ಹೀಗೆ ಪತ್ರ ಬರೆದರು: "ಆತನ ಬಗ್ಗೆ ನನ್ನ ಕೃತಜ್ಞತೆಯ ಋಣ ತೀರದಂತಹದು. ನನ್ನ ವಿಚಾರಗಳಿಂದ ತಮಗೆ ಸಹಾಯವಾಯಿತೆನ್ನುವ ಜನರಿಗೆ ಆ ವಿಚಾರಗಳ ಪ್ರತಿ ಶಬ್ದವೂ ಗುಡ್‌ವಿನ್ನನು ನಿಃಸ್ವಾರ್ಥದಿಂದ ಮಾಡಿದ ಅತಿಶ್ರಮದ ಕೆಲಸದಿಂದ ಪ್ರಕಟಗೊಂಡಿವೆ ಎಂಬುದು ತಿಳಿಯಬೇಕು. ಅವನ ಮರಣದಿಂದ ನನಗೆ ಉಕ್ಕಿನಂತಹ ಗೆಳೆಯನೊಬ್ಬನನ್ನು, ಎಂದೂ ಬತ್ತದ ಭಕ್ತಿಯುಳ್ಳ ಶಿಷ್ಯನೊಬ್ಬನನ್ನು, ಆಯಾಸವೆಂದರೇನು ಎಂಬುದನ್ನೇ ತಿಳಿಯದ ಕೆಲಸಗಾರನೊಬ್ಬನನ್ನು ಕಳೆದುಕೊಂಡಂತಾಗಿದೆ. ಇತರರಿಗಾಗಿಯೇ ಬಾಳುವ ಕೆಲವೇ ಕೆಲವು ವ್ಯಕ್ತಿಗಳಲ್ಲಿ ಒಬ್ಬನನ್ನು ಕಳೆದುಕೊಂಡು ವಿಶ್ವವು ಬಡವಾಗಿದೆ."

ಗುರುವು ತಮ್ಮ ಜೀವನವನ್ನೇ ಮಾನವಜನಾಂಗಕ್ಕೆ ಸಹಾಯ ಮಾಡಲು ಮುಡುಪಾಗಿಟ್ಟರೆ, ಶಿಷ್ಯನು ಪ್ರೀತಿಯ ಕೊಡುಗೆಯಾಗಿ ತನ್ನ ಸೇವೆಯನ್ನು ನಿವೇದಿಸಬಹುದಲ್ಲವೆ ಎಂದು ಗುಡ್‌ವಿನ್ ಹೇಳುತ್ತಿದ್ದನು. ಹೀಗೆ ಶೀಘ್ರಲಿಪಿಕಾರನ ಕೆಲಸವನ್ನು ನಿರ್ವಹಿಸುತ್ತ ತನ್ನ ಸ್ವಾಮಿಯ ವೈಯಕ್ತಿಕ ಆವಶ್ಯಕತೆಗಳನ್ನೂ ನೋಡಿ ಕೊಳ್ಳುತ್ತಿದ್ದನು. ಸ್ವಾಮೀಜಿಯವರ ಮಾತುಗಳನ್ನು ತಪ್ಪಿಲ್ಲದೆ, ಸರಿಯಾಗಿ, ಖಚಿತವಾಗಿ ಬರೆದುಕೊಂಡು ಅನಂತರ ಅದನ್ನು ಟೈಪ್ ಮಾಡಿ, ಪತ್ರಿಕೆಗಳಿಗೆ ಸರಿಯಾದ ಸಮಯಕ್ಕೆ ಪ್ರತಿಗಳನ್ನು ಕಳಿಸಿಕೊಡುತ್ತಿದ್ದನು.

ಸ್ವಾಮೀಜಿ ನಿರರ್ಗಳವಾಗಿ, ವೇಗವಾಗಿ ಮಾತನಾಡುತ್ತಿದ್ದರು. ಪದಗಳು ಸ್ಫೂರ್ತಿಯಿಂದ ತುಂಬಿ ಪ್ರವಾಹದಂತೆ ಹರಿಯುತ್ತಿದ್ದವು. ಸ್ವಾಮೀಜಿಯವರ ಸಂಗದಲ್ಲಿ ಆಧ್ಯಾತ್ಮಿಕ ಸಂವೇದನೆಯನ್ನು ಬೆಳೆಸಿಕೊಂಡ ಗುಡ್‌ವಿನ್ ಅವೆಲ್ಲವನ್ನೂ ಪದಶಃ ಬರೆದಿಡಲು ಸಮರ್ಥನಾದನು. ಸ್ವಾಮೀಜಿಯವರ ಉಜ್ಜ್ವಲ ದೇಶಭಕ್ತಿಯ ಹಾಗೂ ವೇದಾಂತಕ್ಕೆ ಸಂಬಂಧಿಸಿದ ಹೆಚ್ಚಿನ ಸ್ಫೂರ್ತಿಯುತ ಭಾಷಣಗಳಿಗಾಗಿ ದೇಶವು ಕೆಳವರ್ಗದಿಂದ ಬಂದ ಈ ವ್ಯಕ್ತಿಗೆ ಋಣಿಯಾಗಿರಬೇಕು.

ಆ ದಿನಗಳಲ್ಲಿನ ಪ್ರಚಲಿತ ವೇತನದಂತೆ ಗುಡ್‌ವಿನ್ ಸುಲಭವಾಗಿ ದಿನಕ್ಕೆ ೧೫-೧೮ ಡಾಲರುಗಳನ್ನು ಸಂಪಾದಿಸಬಹುದಿತ್ತು. ಆದರೆ ತನ್ನ ಜೀವನದ ಸೀಮಿತ ಆವಶ್ಯಕತೆಗಳಿಗೆ ಬೇಕಾದಷ್ಟನ್ನು ಮಾತ್ರ ಆತ ಸ್ವೀಕರಿಸುತ್ತಿದ್ದ. ನ್ಯೂಯಾರ್ಕಿನ ೫೮ನೆಯ ರಸ್ತೆಯ ವಿವೇಕಾನಂದರ ಮನೆಯ ಇದುರಿನಲ್ಲಿ ಒಂದು ಕೋಣೆಯಲ್ಲಿ ಇದ್ದುಕೊಂಡು ಸ್ವಾಮೀಜಿಯವರ ಜತೆಯೇ ಆತ ಉಣ್ಣುತ್ತಿದ್ದನು. ಆಗಾಗ ಒಬ್ಬರನ್ನೊಬ್ಬರು ತಮಾಷೆ ಮಾಡಿಕೊಳ್ಳುತ್ತ, ಗಂಭೀರ ಚರ್ಚೆಗಳಲ್ಲಿ ತೊಡಗುತ್ತ ಜೀವಂತ ಸಂಭಾಷಣೆಗಳಿಂದ ಆ ಗುಂಪು ಸ್ಫೂರ್ತಿಯುತವಾಗಿತ್ತು.

ತನ್ನ ಸ್ವಾಮಿಯನ್ನು ನೆರಳಿನಂತೆ ಹಿಂಬಾಲಿಸುತ್ತ ಗುಡ್‌ವಿನ್ ಅವರ ಸಾರ್ವಜನಿಕ ಹೇಳಿಕೆಗಳನ್ನು ಬರೆದಿಡುತ್ತಿದ್ದನು. ೧೮೯೬ರಲ್ಲಿ ಡೆಟ್ರಾಯಿಟ್ ಮತ್ತು ಬೋಸ್ಟನ್‌ಗಳಿಗೆ ಸ್ವಾಮೀಜಿಯವರೊಟ್ಟಿಗೆ ಪ್ರಯಾಣಿಸಿದನು. ಸ್ವಾಮೀಜಿಯವರು ಇಂಗ್ಲೆಂಡಿಗೆ ಎರಡನೆಯ ಭೇಟಿ ಇತ್ತ ಸಂದರ್ಭದಲ್ಲಿ ಅವರ ಜೊತೆಗಿದ್ದನು. ಅಲ್ಲಿ ಸಾಮಾಜಿಕ ಪ್ರತಿಷ್ಠೆಯ ಶ್ರೀಮಂತ ಶಿಷ್ಯರುಗಳು ಬಡವನಾದ ಈತನ ಜತೆ ಒಂದೇ ಮೇಜಿನ ಸುತ್ತ ಕೂರಲು ಇಷ್ಟಪಡುತ್ತಿರಲಿಲ್ಲ. ಹೆಚ್ಚಿನ ಮುಜುಗರವನ್ನು ತಪ್ಪಿಸಲು ಗುಡ್‌ವಿನ್ ಅಮೆರಿಕಕ್ಕೆ ಹಿಂದಿರುಗಿ, ಸ್ವಾಮೀಜಿಯ ಆತ್ಮೀಯ ಶಿಷ್ಯೆ ಶ್ರೀಮತಿ ಓಲ್ ಬುಲ್‌ರವರ ಜತೆ ಇದ್ದನು. ಸ್ವಾಮೀಜಿ ಭಾರತಕ್ಕೆ ಬರಲು, ಆತ ಅವರ ಜತೆಗೂಡಿ ಆಲ್ಮೋರ, ಲಾಹೋರ್, ಜಮ್ಮು, ಡೆಹ್ರಾಡೂನ್‌ಗಳಿಗೆ ಹೋದನು. "ಕೊಲಂಬೋ ಇಂದ ಆಲ್ಮೋರಕೆ" ಪುಸ್ತಕದಲ್ಲಿನ ಉಪನ್ಯಾಸಗಳು ನಾಡಿನ ಜನತೆಯಲ್ಲಿ ಉಜ್ಜ್ವಲವಾದ ದೇಶಭಕ್ತಿಯನ್ನು ಉದ್ದೀಪನಗೊಳಿಸುವ ಶಕ್ತಿಯನ್ನು ಈಗಲೂ ಪಡೆದಿವೆ ಎಂಬುದನ್ನು ಗಮನಿಸಿದರೆ ಭಾರತೀಯರು ಆತನಿಗೆ ಎಷ್ಟು ಚಿರ ಋಣಿಗಳು ಎಂಬುದರ ಅರಿವಾಗುತ್ತದೆ.

ಅನಂತರ ಗುಡ್‌ವಿನ್ ಸ್ವಾಮೀಜಿಯವರನ್ನು ಬೀಳ್ಕೊಂಡು ಮದ್ರಾಸಿಗೆ ಹೋಗಿ ಮದ್ರಾಸ್ ಮೇಲ್ ಪತ್ರಿಕೆಯಲ್ಲಿ ತಾತ್ಕಾಲಿಕ ಕೆಲಸಕ್ಕೆ ಸೇರಿಕೊಂಡಿದ್ದನು. ಅಲ್ಲಿ ಕರುಳಿನ ಜ್ವರಕ್ಕೆ ತುತ್ತಾಗಿ ಡಾಕ್ಟರ ಸಲಹೆಯ ಮೇರೆಗೆ ಆತನು ಊಟಿಗೆ ವಿಶ್ರಾಂತಿಗೆ ಹೋದನು. ಆದರೆ ಆರೋಗ್ಯ ಸುಧಾರಿಸದೆ, ಎಳವೆಯಲ್ಲೆ ಆಯಸ್ಸು ತೀರಿ, ಜೂನ್ ೨, ೧೮೯೮ರಲ್ಲಿ ಅಕಾಲ ಮರಣಕ್ಕೆ ಬಲಿಯಾದನು. ಅವನ ಅವಶೇಷಗಳನ್ನು ಊಟಿಯ ಸೇಂಟ್ ಥಾಮಸ್ ಸಿಮೆಟ್ರಿಯಲ್ಲಿ ಭೂಮಿಗೆ ಇಡಲಾಯಿತು.

ಆಲ್ಮೋರದಲ್ಲಿದ್ದ ಸ್ವಾಮೀಜಿಯವರಿಗೆ ಗುಡ್‌ವಿನ್‌ನ ಸಾವಿನ ವಿಷಯ ತಿಳಿದು ದೊಡ್ಡ ಆಘಾತವಾಯಿತು. ಈ ಆಘಾತದಿಂದ ಅವರು ಕೆಲವು ದಿನ ಯಾರೊಡನೆಯೂ ಮಾತನಾಡಲೂ ಆಗದಷ್ಟು ದುಃಖದಲ್ಲಿ ಮುಳುಗಿಹೋದರು. ದಿನ ನಿತ್ಯದ ಸಾಮಾನ್ಯ ಬದುಕಿಗೆ ಅವರ ಮನಸ್ಸು ಹಿಂತಿರುಗಲು ಹಲವಾರು ದಿನಗಳೇ ಹಿಡಿದವು. ಆಗ ಗುಡ್‌ವಿನ್‌ನ ತಾಯಿಗೆ ಮೇಲೆ ಉಲ್ಲೇಖಿಸಿದ ಸಂತಾಪ ಪತ್ರದೊಂದಿಗೆ ಈ ಕೆಳಗಿನ ಪದ್ಯವೊಂದನ್ನೂ ಕಳಿಸಿಕೊಟ್ಟರು.

### ಶಾಂತಿರಸ್ತು

ನುಗ್ಗಿ ನಡೆಯೆಲೆ ಆತ್ಮ! ಮುನ್ನುಗ್ಗಿ ನಡೆ ಜವದಿ
ಚುಕ್ಕೆ ಚೆಲ್ಲಿದ ನಿನ್ನ ಹಾದಿಯಲ್ಲಿ;
ನುಗ್ಗಿ ನಡೆ, ಅಮೃತಾತ್ಮ, ಕಾಲ-ದೇಶಗಳೆಲ್ಲ
ನಿನ್ನ ಕಾಣ್ಕೆಯನೆಂದು ಮಸುಳದಲ್ಲಿ—
ಶಾಂತಿಶುಭವೆಂದೆಂದು ನಿನಗಾಗಲಿ!

ನಿನ್ನ ಸೇವೆಯು ಸತ್ಯ, ನಿನ್ನ ತ್ಯಾಗವು ಪೂರ್ಣ,
ನಿನ್ನೊಲವಿನೆದೆ ತನ್ನ ಮನೆಯ ಕಾಣುವುದು;
ಕಾಲದೇಶವ ಕೊಲ್ವ ಚಿರ ಮಧುರ ಸ್ಮೃತಿಗಳವು
ದೇವಗರ್ಪಿತವಾದ ಕುಸುಮರಾಶಿಗಳಂತೆ
ನೀ ನಡೆದ ಹಾದಿಯನು ಹಿಂದೆ ತುಂಬುವುದು!

**(ಕನ್ನಡಾನುವಾದ : ಹೆಚ್. ಎಸ್. ಮುರಳೀಧರ)**